ವೋಟ್ ಬ್ಯಾಂಕ್ ಅಲ್ಲ ಅನ್ನೋ ಒಂದೇ ಕಾರಣಕ್ಕ ನಮ್ಮ ಕಡೆ ಲಕ್ಷ್ಯಾನೇ ಕೊಟ್ಟಿಲ್ಲ.

ಎಲ್ಲ ದೃಷ್ಟಿಯಿಂದಲೂ ನಾವೂ ಮೀಸಲಾತಿಗೆ ಅರ್ಹರಿದ್ದೀವಿ, ಆದ್ರೂ ಯಾರೂ ಇತ್ತ ಕಡೆ ಕಾಳಜಿ ತಕ್ಕೊಂಡಿಲ್ಲ. ನಮ್ಮ ಸಮುದಾಯದ ಜನರ ಒಗ್ಗಟ್ಟು, ಸಂಘಟನೇನೂ ಅಷ್ಟಕ್ಕಷ್ಟೇ ಐತಿ, ಗಟ್ಟಿ ಪ್ರಮಾಣದಲ್ಲಿ ಆಗಿಲ್ಲ. ಉತ್ತರ ಕರ್ನಾಟಕದ ಎಲ್ಲ ರಾಜಕಾರಣಿಗಳಿಗೂ ನಮ್ಮ ಪರಿಸ್ಥಿತಿಯ ಬಗ್ಗೆ ಗೊತ್ತೈತಿ. ಅವರುಗಳೂ ನಮ್ಮ ಕಡೆ ದೃಷ್ಟಿ ಹರಿಸಿ, ಈ ಜನ ಯೋಗ್ಯರಿದ್ದಾರ, ಇವರು ತೀರಾ ಹಿಂದುಳಿದಿದ್ದಾರ ಅಂತ ನಮ್ಮ ಬಗ್ಗೆ ರೆಕಮೆಂಡ್ ಮಾಡೋ ರಾಜಕಾರಣಿಗಳಿಲ್ಲ. ಎಲ್ಲಾನೂ ಮತಬ್ಯಾಂಕಿನ ದೃಷ್ಟಿಯಿಂದಲೇ ಯೋಚ್ನೆ ಮಾಡಿದ್ರ ಮನುಷ್ಯತ್ವ ಅನ್ನೋದಕ್ಕೆ ಬೆಲೆ ಎಲ್ಲೈತ್ರಿ?




◆ **ನಿಮ್ಮ ಆತ್ಮಕತೆ 'ಗೊಂದಲಿಗ್ಯಾ', ಈ ಅನುಭವಗಳನ್ನ ದಾಖಲಿಸಲೇಬೇಕು ಅಂತ ಯಾಕನ್ನಿಸಿತು? ಬರವಣಿಗೆಯ ಕಷ್ಟ-ಸುಖದ ಬಗ್ಗೆ ಹೇಳಿ.**

'ಗೊಂದಲಿಗ್ಯಾ' ಪುಸ್ತಕ ಪ್ರಕಟ ಆಗೋಕೂ ಮೊದಲು ಗೊಂದಲಿಗರ ಕುರಿತಾಗಿ ಕೆಲವು ಪುಸ್ತಕಗಳು ಬಂದಿದ್ವು. ಅವು ನಮ್ಮ ಸಮುದಾಯದ ಸಂಪ್ರದಾಯ, ಒಳಪಂಗಡಗಳು, ಬಾಲ್ಯವಿವಾಹ ಆಚರಣೆಯಂತಹ ಹೊರಗಿನ ವಿವರಗಳನ್ನ ಮಾತ್ರ ಕೊಡ್ತಾವ. ಯಾಕಂದ್ರ ಅದನ್ನ ಬರದವ್ರು ನಮ್ಮ ಜನಗಳ ಬಗ್ಗೆ ಹೊರಗಿನಿಂದ ಕೇಳಿ, ನೋಡಿ ಬರ್ದಾರ. ಬಹುಶಃ ಇದಕ್ಕೆ ಕಾರಣ ಅಂದ್ರ, ಬರೆದ ಬಹುಪಾಲು ಮಂದಿ ನಮ್ಮ ಸಮುದಾಯಕ್ಕೆ ಸೇರಿದವರಲ್ಲ, ಹಾಗಾಗಿ ಅವರು ಅದನ್ನ ನೋಡೋ ರೀತಿ ಒಳಗ ವ್ಯತ್ಯಾಸ ಆಗ್ತದ. ಇನ್ನು... ನಮ್ಮ ಸಮುದಾಯದವರೇ ಒಬ್ಬಿಬ್ಬರು ಬರದವ್ರು ಕೂಡ ಸಮುದಾಯದ ಒಳಗಿನ ಸಂಕಟಗಳನ್ನ ಬರ್‍ಯಾಕ ಹೋಗಿಲ್ಲ, ಬರೇ ನಾವು ಹಾಡೋ ಪದಗಳ ಬಗ್ಗೆ ಬರದಾರ, ನಾವು ಫಂಡರಾಪುರದ ಭಕ್ತರು ಇತ್ಯಾದಿ ಹೇಳ್ಕೊಂಡು ಸುಮ್ಮನಾಗ್ಯಾರ. ನಿಜವಾಗಿ ನಮ್ಮ ಕಮ್ಯುನಿಟಿ ಬಗ್ಗೆ ಏನು ಹೇಳಬೇಕು ಅದನ್ನ ಹೇಳಿಲ್ಲ ಅನ್ನೋದು ನನ್ನ ವೈಯಕ್ತಿಕ ಅಭಿಪ್ರಾಯ. ನಮ್ಮ ಜನ್ಗೊಳ ಆಂತರಿಕ ತುಮುಲಗಳು, ನಾವು ಅನುಭವಿಸೋ ನೋವು, ಅಂತರಂಗದ ಕೆಲವು ವಿಷಯಗಳ ಭಾಗವಾಗಿ ನಾನು ಬೆಳದಿದ್ದರಿಂದ, ಸಂಕಟ ಅನುಭವಿಸಿದ್ದರಿಂದ ನನಗ ಒಳಗಿನಿಂದ ನೋಡಿ ಬರೆಯೋಕೆ ಸಾಧ್ಯ ಆಯ್ತು.

ಕೆಲವೊಮ್ಮೆ ಸ್ನೇಹಿತರ ಜೊತೆ ನಾನು ಅನುಭವಿಸಿದ ಕಷ್ಟಗಳನ್ನ ಹಂಚಿಕೊಳ್ಳುತ್ತಿದ್ದೆ. ಅಲ್ಲಮಪ್ರಭು ಬೆಟ್ಟದೂರು, ಎಚ್.ಎಸ್. ಪಾಟೀಲರು, ಕುಂವೀ ಮುಂತಾದ ಮಂದಿ 'ನಿಮ್ಮ ಅನುಭವಗೊಳು ಮರಾಠಿ ದಲಿತ ಆತ್ಮಕತೆಯ ಅನುಭವಗಳಿಗೆ ಸಮೀಪ ಅನ್ನಿಸ್ತಾವ. ಅಲೆಮಾರಿ ಸಮುದಾಯಗಳ ಬಗ್ಗೆ ಹೆಚ್ಚು ದಾಖಲಾಗಿಲ್ಲ. ನಿಮ್ಮ ನೋವನ್ನೂ ದಾಖಲಿಸಿದಂಗ ಆಗ್ತದ, ನಿಮ್ಮ ಸಮುದಾಯನ ಕುರಿತು ಹೇಳಿದಂಗೂ ಆಗ್ತದ ಬರೀರಿ' ಅಂತ ಅಂದ ಮಾತು ಗಟ್ಟಿಯಾಗಿ ನನ್ನ ತಲೆಯಲ್ಲಿ ತುಂಬಿಕೊಂಡಿತು. ಇವರುಗಳ ಒತ್ತಾಯ ಒಂದು ದಿನ ಹಿಡ್ದು ಬರೀಲಿಕ್ಕ ಕೂರುಸ್ತು. ಬರೀತಾ ಹೋದೆ, ಆದ್ರೆ ಕೆಲವೊಮ್ಮೆ ಊರಿಂದ ಊರಿಗೆ, ಮನೆಯಿಂದ ಮನೆಗೆ ಹೋಗೋವಾಗ ಬರದದ್ದು ಕಳದುಹೋತು. ಅನಾರೋಗ್ಯದಿಂದ ಇನ್ನೂ ಕೆಲ ವರ್ಷ ಬರವಣಿಗೀನೆ ಮುಂದುವರಿಲಿಲ್ಲ. ಬರೀತಾ ಬರೀತಾ ನನಗೆ ಅದು ನನ್ನ ವೈಯಕ್ತಿಕ ಕಥೆ ಮಾತ್ರ ಅಲ್ಲ, ನನ್ನ ಸಮುದಾಯನೇ ಒಳಗೆ ಸೇರಿಕೊಂಡು, 'ಗೊಂದಲಿಗ್ಯಾ' ಅನ್ನೋದು ನನ್ನ ಆತ್ಮಕತೇನೂ ಹೌದು, ಸಮುದಾಯದ ಆತ್ಮಕತೇನೂ ಹೌದು ಅನ್ನಿಸ್ತು. ಅದಕ್ಕೇ ನಾನು ಆ ಪುಸ್ತಕದ